# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 830(797) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19.08.2025 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಳೆದ 2 ವರ್ಷಗಳಿಂದ ಕೈಗಾರಿಕಾ ವಲಯ ವಿಸ್ತರಣೆಗಾಗಿ ಸರ್ಕಾರ ವಶಪಡಿಸಿಕೊಂಡಿರುವ ಜಮೀನುಗಳ ವಿಸ್ತೀರ್ಣ ಎಷ್ಟು; **(ವರ್ಷವಾರು, ತಾಲ್ಲೂಕುವಾರು ವಿವರ ನೀಡುವುದು)** | ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಳೆದ 2 ವರ್ಷಗಳಿಂದ ಕೈಗಾರಿಕಾ ವಲಯ ವಿಸ್ತರಣೆಗಾಗಿ ಸರ್ಕಾರ ವಶಪಡಿಸಿಕೊಂಡಿರುವ ಜಮೀನುಗಳ ವರ್ಷವಾರು ಹಾಗೂ ತಾಲ್ಲೂಕುವಾರು ವಿವರವನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ. |
| ಆ) | ಹಾಗಿದ್ದಲ್ಲಿ, ಈ ಪೈಕಿ ಖಾಸಗಿ ಜಮೀನೆಷ್ಟು ಮತ್ತು ಸರ್ಕಾರಿ ಜಮೀನೆಷ್ಟು; **(ತಾಲ್ಲೂಕುವಾರು ಮಾಹಿತಿ ನೀಡುವುದು)** | |
| ಇ) | ಖಾಸಗಿ ಜಮೀನುಗಳಿಗೆ ಅಲ್ಲಿನ ಮಾರುಕಟ್ಟೆ ದರವೆಷ್ಟು; ಸರ್ಕಾರ ನಿಗದಿಪಡಿಸಿರುವ ದರವೆಷ್ಟು; **(ಮಾಹಿತಿ ನೀಡುವುದು)** | ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸುವ ಸಮಯದಲ್ಲಿ ಭೂಸ್ವಾಧೀನಪಡಿಸಿಕೊಳ್ಳುವ ರೈತರ ಜಮೀನಿನ/ ಭೂಮಿಯ ಪ್ರಸ್ತುತ ಮಾರುಕಟ್ಟೆಯ ಬೆಲೆಯು ಸಂಬಂಧಪಟ್ಟ ಜಿಲ್ಲಾಧಿಕಾರಿ / ಮಂಡಳಿಯ ವಿಶೇಷ ಜಿಲ್ಲಾಧಿಕಾರಿ ಯವರ ಅಧ್ಯಕ್ಷತೆಯಲ್ಲಿ ಜರುಗುವ ಭೂದರ ನಿರ್ಧರಣಾ ಸಲಹಾ ಸಮಿತಿ ಸಭೆಯಲ್ಲಿ ನಿರ್ಧರಿಸುವ ಬೆಲೆಯನ್ನು ಪರಿಗಣಿಸಿ ಶಿಫಾರಸ್ಸು ಮಾಡುವ ದರಕ್ಕೆ ಮಂಡಳಿ ಸಭೆಯ ಅನುಮೋದನೆ ಪಡೆದು ನಿಯಮಾನುಸಾರ ಪರಿಹಾರ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ) | ಕೈಗಾರಿಕೆಗಳಿಗೆ ಜಮೀನು ಹಂಚಿಕೆ ಮಾಡುವಾಗ ಸರ್ಕಾರ ಅನುಸರಿಸುವ ಮಾನದಂಡಗಳೇನು? (ವಿವರ ನೀಡುವುದು) | ಮಂಡಳಿ ವತಿಯಿಂದ ಜಮೀನು ಹಂಚಿಕೆ ಮಾಡುವಾಗ ಅನುಸರಿಸುತ್ತಿರುವ ಮಾನದಂಡಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ. |

**ಸಂಖ್ಯೆ: ಸಿಐ 442 ಐಎಪಿ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

## ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 890(797) ರ ಅನುಬಂಧ-1

| ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಳೆದ 2 ವರ್ಷಗಳಲ್ಲಿ ಕೆಐಎಡಿಬಿ ವತಿಯಿಂದ ಕೈಗಾರಿಕಾ ವಲಯ ವಿಸ್ತರಣೆಗಾಗಿ ವರ್ಷವಾರು ಹಾಗೂ ತಾಲ್ಲೂಕುವಾರು ಜಮೀನನ್ನು ಭೂಸ್ವಾಧೀನಪಡಿಸಲಾಗಿರುವ ವಿವರ | | | | | | |
|---|---|---|---|---|---|---|
| ದೊಡ್ಡಬಳ್ಳಾಪುರ ತಾಲ್ಲೂಕು | 28(4) ಅಂತಿಮ ಅಧಿಸೂಚನೆ ವಿಸ್ತೀರ್ಣ (ಎಕರೆ-ಗುಂಟೆ) | | | | | |
| | (2023-24) | | | (2024-25) | | |
| | ಖಾಸಗಿ | ಸರ್ಕಾರಿ | ಒಟ್ಟು ವಿಸ್ತೀರ್ಣ | ಖಾಸಗಿ | ಸರ್ಕಾರಿ | ಒಟ್ಟು ವಿಸ್ತೀರ್ಣ |
| | 114-22.75 | 4-14.15 | 118-37 | 1371-02.04 | 650-13.04 | 2021-15.08 |
| | 28(1) ಪ್ರಾಥಮಿಕ ಅಧಿಸೂಚನೆ ವಿಸ್ತೀರ್ಣ (ಎಕರೆ-ಗುಂಟೆ) | | | | | |
| | (2023-24) | | | (2024-25) | | |
| | ಖಾಸಗಿ | ಸರ್ಕಾರಿ | ಒಟ್ಟು ವಿಸ್ತೀರ್ಣ | ಖಾಸಗಿ | ಸರ್ಕಾರಿ | ಒಟ್ಟು ವಿಸ್ತೀರ್ಣ |
| | - | - | - | 718-14.08 | 86-24.08 | 804-38.12 |
| ನೆಲಮಂಗಲ ತಾಲ್ಲೂಕು | 28(4) ಅಂತಿಮ ಅಧಿಸೂಚನೆ ವಿಸ್ತೀರ್ಣ (ಎಕರೆ-ಗುಂಟೆ) | | | | | |
| | (2023-24) | | | (2024-25) | | |
| | ಖಾಸಗಿ | ಸರ್ಕಾರಿ | ಒಟ್ಟು ವಿಸ್ತೀರ್ಣ | ಖಾಸಗಿ | ಸರ್ಕಾರಿ | ಒಟ್ಟು ವಿಸ್ತೀರ್ಣ |
| | 956-37 | 56-03 | 1013-00 | 476-02.04 | 50-12.04 | 526-15.04 |
| ಹೊಸಕೋಟೆ ತಾಲ್ಲೂಕು | 28(1) ಪ್ರಾಥಮಿಕ ಅಧಿಸೂಚನೆ ವಿಸ್ತೀರ್ಣ (ಎಕರೆ-ಗುಂಟೆ) | | | | | |
| | (2023-24) | | | (2024-25) | | |
| | ಖಾಸಗಿ | ಸರ್ಕಾರಿ | ಒಟ್ಟು ವಿಸ್ತೀರ್ಣ | ಖಾಸಗಿ | ಸರ್ಕಾರಿ | ಒಟ್ಟು ವಿಸ್ತೀರ್ಣ |
| | - | - | - | 502-18.08 | 494-06.04 | 996-24.08 |
| ದೇವನಹಳ್ಳಿ ತಾಲ್ಲೂಕು | 28(4) ಅಂತಿಮ ಅಧಿಸೂಚನೆ ವಿಸ್ತೀರ್ಣ (ಎಕರೆ-ಗುಂಟೆ) | | | | | |
| | (2023-24) | | | (2024-25) | | |
| | ಖಾಸಗಿ | ಸರ್ಕಾರಿ | ಒಟ್ಟು ವಿಸ್ತೀರ್ಣ | ಖಾಸಗಿ | ಸರ್ಕಾರಿ | ಒಟ್ಟು ವಿಸ್ತೀರ್ಣ |
| | - | - | - | 760-38.08 | 273-38 | 1034-36.08 |

ವಿಶೇಷ ಜಿಲ್ಲಾಧಿಕಾರಿ

# ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಬೆಂಗಳೂರು

ಅನುಬಂಧ-2

## ಕೈಗಾರಿಕಾ ನಿವೇಶನಗಳ ಹಂಚಿಕೆಯ ನಿಯಮಾವಳಿಗಳು

ಕೈಗಾರಿಕಾ ಉದ್ದೇಶಿತ ಯೋಜನೆಗಳಿಗೆ ಸರ್ಕಾರವು ಭೂಮಿಯನ್ನು ಕೆಐಎಡಿಬಿ ಮೂಲಕ ಕೈಗಾರಿಕೆಗಳಿಗೆ ಹಂಚಿಕೆ ಮಾಡಲು ಈ ಕೆಳಕಂಡ ಸಕ್ಷಮ ಪ್ರಾಧಿಕಾರಗಳಿಂದ ಅನುಮೋದನೆ ಪಡೆದ ನಂತರ, ನಿಗದಿತ ಅರ್ಜಿ ನಮೂನೆಯೊಂದಿಗೆ ಮಂಡಳಿಯ ಕೇಂದ್ರ ಕಛೇರಿಗಳಿಗೆ/ ವಲಯ ಕಛೇರಿಗಳಿಗೆ ನಿವೇಶನ ಹಂಚಿಕೆಗಾಗಿ ಅರ್ಜಿಗಳನ್ನು ಸಲ್ಲಿಸಬೇಕಾಗುವುದು.

| | |
|---|---|
| ಕರ್ನಾಟಕ ಸರ್ಕಾರದ ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿನ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡುವ ಸಮಿತಿ. | ರೂ. 500 ಕೋಟಿಗಳಿಗೂ ಮೀರಿದ ಬಂಡವಾಳ ಹೂಡಿಕೆಯ ಯೋಜನೆಗಳನ್ನು ಪರಿಶೀಲಿಸಿ, ಅನುಮೋದನೆ ನೀಡಲಾಗುವುದು. |
| ಕರ್ನಾಟಕ ಸರ್ಕಾರದ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ಮಂತ್ರಿಗಳ ಅಧ್ಯಕ್ಷತೆಯಲ್ಲಿನ ರಾಜ್ಯ ಮಟ್ಟದ ಏಕ ಗವಾಕ್ಷಿ ಒಪ್ಪಿಗೆ ನೀಡುವ ಸಮಿತಿ. | ರಾಜ್ಯದಲ್ಲಿ ರೂ. 15 ಕೋಟಿಗಳಿಗಿಂತ ಹೆಚ್ಚಿನ ಮತ್ತು ರೂ. 500 ಕೋಟಿಗಳ ಒಳಗಿನ ಬಂಡವಾಳ ಹೂಡಿಕೆಯ ಕೈಗಾರಿಕಾ ಯೋಜನೆಗಳನ್ನು ಪರಿಶೀಲಿಸಿ, ಅನುಮೋದನೆ ನೀಡಲಾಗುವುದು. |
| ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ. | ರೂ.15 ಕೋಟಿಗಳವರೆಗೆ ಬಂಡವಾಳ ಹೂಡುವ ಸಣ್ಣ ಕೈಗಾರಿಕಾ ಘಟಕಗಳ ಅರ್ಜಿಗಳನ್ನು ಪರಿಶೀಲಿಸಿ, ಅನುಮೋದನೆ ನೀಡಲಾಗುವುದು. |

ನಿವೇಶನ ಕೋರಿ ನಿಗದಿತ ಅರ್ಜಿಗಳ ಜೊತೆಯಲ್ಲಿ ಈ ಕೆಳಕಂಡ ದಾಖಲೆಗಳೊಂದಿಗೆ ಕೆ.ಐ.ಎ.ಡಿ.ಬಿ. ಕಛೇರಿಗೆ ಅಥವಾ ಜಿಲ್ಲಾ ಕೈಗಾರಿಕಾ ಕೇಂದ್ರ ಕಛೇರಿಗೆ ಸಲ್ಲಿಸುವುದು. ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ರಾಮನಗರ ಜಿಲ್ಲೆಗಳಲ್ಲಿನ ಕೈಗಾರಿಕಾ ಪ್ರದೇಶಗಳಿಗೆ ನಿವೇಶನ ಕೋರುವ ಅರ್ಜಿಗಳನ್ನು ಕೆ.ಐ.ಎ.ಡಿ.ಬಿ ಕೇಂದ್ರ ಕಛೇರಿ/ಕರ್ನಾಟಕ ಉದ್ಯೋಗ ಮಿತ್ರ, ಬೆಂಗಳೂರು ಇಲ್ಲಿಗೆ ಸಲ್ಲಿಸುವುದು.

- ವಿವರವಾದ ಯೋಜನಾ ವರದಿ ದ್ವಿಪ್ರತಿಯಲ್ಲಿ
- ಸಂಘದ ವಿವರಣಾ ಪತ್ರ ಮತ್ತು ನಿಯಮಾವಳಿಗಳು/ಪಾಲುಗಾರಿಕೆ ಕರಾರು ಪತ್ರ/ ಮೆಮೊರೆಂಡಮ್ ಅಂಡ್ ಆರ್ಟಿಕಲ್ಸ್ ಆಫ್ ಅಸೋಷಿಯೇಷನ್ ಅನ್ವಯಿಸುವಂತೆ ದ್ವಿಪ್ರತಿಯಲ್ಲಿ.
- ಉದ್ಯೋಗ ಆಧಾರ್ ನೋಂದಣಿ ಪ್ರಮಾಣ ಪತ್ರ.
- ಭೂಮಿಯ ಉದ್ದೇಶಿತ ಉಪಯೋಗವನ್ನು ಸೂಚಿಸುವ ನಕ್ಷೆ.
- ಮುಂಗಡ ಠೇವಣಿಯಾಗಿ ಎಕರೆಯೊಂದಕ್ಕೆ ರೂ. 5000/-ಗಳು.
- ರಾಜ್ಯ ಉನ್ನತ ಮಟ್ಟದ ಅನುಮೋದನಾ ಸಮಿತಿ / ರಾಜ್ಯ ಮಟ್ಟದ ಏಕ ಗವಾಕ್ಷಿ ಸಮಿತಿ / ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ ಅನುಮೋದನಾ ಪತ್ರ.

**ಕೈಗಾರಿಕಾ ನಿವೇಶನಗಳ ಹಣ ಪಾವತಿಸುವ ನಿಯಮಗಳು**

| | |
|---|---|
| ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ತುಮಕೂರು, ಮೈಸೂರು, ಹಾಸನ, ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಕೈಗಾರಿಕಾ ಪ್ರದೇಶಗಳ ನಿವೇಶನ ಬೆಲೆಯನ್ನು ಪಾವತಿಸುವ ವಿಧಾನ (ಸಾಮಾನ್ಯ ವರ್ಗದ ಉದ್ದಿಮೆದಾರರಿಗೆ) | ಅ. ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ 30 ರಷ್ಟು ಹಣವನ್ನು ಮುಂಗಡವಾಗಿ ಪಾವತಿಸುವುದು.<br>ಆ. ನಿವೇಶನ ಹಂಚಿಕೆಯಾದ ದಿನದಿಂದ 90 ದಿನಗಳ ಒಳಗಾಗಿ ನಿವೇಶನದ ಬಾಕಿ 70% ಬೆಲೆಯನ್ನು ಪಾವತಿಸುವುದು. |
| ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಕೈಗಾರಿಕಾ ಪ್ರದೇಶಗಳ ನಿವೇಶನ ಬೆಲೆಯನ್ನು ಪಾವತಿಸುವ ವಿಧಾನ. (ಸಾಮಾನ್ಯ ವರ್ಗದ ಉದ್ದಿಮೆದಾರರಿಗೆ) | ಅ ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ 20 ರಷ್ಟು ಹಣವನ್ನು ಮುಂಗಡವಾಗಿ ಪಾವತಿಸುವುದು.<br>ಆ ನಿವೇಶನ ಹಂಚಿಕೆಯಾದ ದಿನದಿಂದ 90 ದಿನಗಳ' ಒಳಗಾಗಿ ನಿವೇಶನದ ಬಾಕಿ 80% ಬೆಲೆಯನ್ನು ಪಾವತಿಸುವುದು. |

| | |
|---|---|
| ಮಹಿಳಾ ಉದ್ದಿಮೆದಾರರು ನಿವೇಶನದ ಬೆಲೆಯನ್ನು ಪಾವತಿಸುವ ವಿಧಾನ. | ಅ. ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ. 10 ರಷ್ಟು ಮೊತ್ತವನ್ನು ಮುಂಗಡ ಠೇವಣಿಯಾಗಿ ಅರ್ಜಿಯ ಜೊತೆ ಪಾವತಿಸುವುದು.<br>ಆ. ನಿವೇಶನ ಹಂಚಿಕೆಯಾದ ದಿನದಿಂದ 180 ದಿನಗಳ ಒಳಗಾಗಿ ನಿವೇಶನದ ಬಾಕಿ 90% ಬೆಲೆಯನ್ನು ಪಾವತಿಸುವುದು. |
| ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರು, ಅಂಗವಿಕಲ ಉದ್ದಿಮೆದಾರರು ಮತ್ತು ಮಾಜಿ ಸೈನಿಕರು ನಿವೇಶನದ ಬೆಲೆಯನ್ನು ಪಾವತಿಸುವ ವಿಧಾನ. | ಇ. ಅರ್ಜಿಯ ಜೊತೆ ನಿವೇಶನ ಹಂಚಿಕೆಯ ಬೆಲೆಯ ಶೇ. 20/30 ರಷ್ಟು ಮೊತ್ತವನ್ನು ಮುಂಗಡ ಠೇವಣಿಯಾಗಿ ಅರ್ಜಿಯ ಜೊತೆ ಪಾವತಿಸುವುದು.<br>ಈ. ನಿವೇಶನ ಹಂಚಿಕೆಯಾದ ದಿನದಿಂದ 6 ಸಮ ತ್ರೈಮಾಸಿಕ ಕಂತುಗಳಲ್ಲಿ ನಿವೇಶನದ ಬಾಕಿ ಶೇ.80/70 ಬೆಲೆಯನ್ನು ಪಾವತಿಸುವುದು. |
| ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರು | ಉ. ಮಂಡಳಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಗೆ ಹಂಚಿಕೆ ಮಾಡಲಾಗುವ ಜಮೀನಿನ ಹಂಚಿಕೆ ದರದಲ್ಲಿ ಶೇ.75ರ ರಿಯಾಯಿತಿಯನ್ನು ನೀಡಲಾಗುವುದು ಮತ್ತು ಈ ಮೊತ್ತವನ್ನು ಸರ್ಕಾರದಿಂದ SCP/TSP ಯೋಜನೆಯಡಿ ಬಿಡುಗಡೆಯಾಗುವ ಅನುದಾನದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗುವುದು.<br>ಊ. ಮಂಡಳಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ದಿಮೆದಾರರಿಂದ ನಿವೇಶನ ಹಂಚಿಕೆ ದರದ ಮೇಲೆ ಶೇ.10ರ ಹಣವನ್ನು ಅರ್ಜಿಯ ಜೊತೆಗೆ ಪ್ರಾರಂಭಿಕ ಠೇವಣಿಯನ್ನಾಗಿ ಪಾವತಿಸಿಕೊಂಡು ಹಂಚಿಕೆ ಪತ್ರ ನೀಡುವುದು ಮತ್ತು ಸ್ವಾಧೀನ ಪತ್ರ ನೀಡಿ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರವನ್ನು ನೆರವೇರಿಸಲಾಗುವುದು.<br>ಋ. ನಿವೇಶನ ಹಂಚಿಕೆ ದರದ ಬಾಕಿ ಶೇ. 15 ರ ಹಣವನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ ಶೇ.10 ರಷ್ಟು ಬಡ್ಡಿಯೊಂದಿಗೆ ಸ್ವಾಧೀನಪತ್ರ ನೀಡಿದ ದಿನಾಂಕದಿಂದ ವಸೂಲಾತಿ ಮಾಡಿಕೊಳ್ಳುವುದು ಮತ್ತು ಸದರಿ ಮೊತ್ತವನ್ನು ನಿಗದಿತ ಅವಧಿಯಲ್ಲಿ |

| | |
|---|---|
| | ಪಾವತಿಸುವ ಕುರಿತು ಉದ್ದಿಮೆದಾರರಿಂದ ಸೂಕ್ತ ಮುಚ್ಚಳಿಕೆ ಪತ್ರ ಪಡೆದುಕೊಳ್ಳಲಾಗುವುದು. |

ಸಾಮಾನ್ಯ ವರ್ಗದ ಉದ್ದಿಮೆದಾರರಿಗೆ ಹಂಚಿಕೆಯಾದ ನಿವೇಶನದ ಪೂರ್ಣ ಮೊತ್ತವನ್ನು ಪಾವತಿಸಿದ ನಂತರ ಹಂಚಿಕೆಯ ದೃಢೀಕರಣದ ಪತ್ರವನ್ನು ನೀಡಿ ನಿವೇಶನದ ಸ್ವಾಧೀನ ಪತ್ರ ನೀಡಲಾಗುವುದು. ನಂತರ ಗುತ್ತಿಗೆ ಕರಾರು ಪತ್ರವನ್ನು ನೆರವೇರಿಸಲಾಗುವುದು. (10 ವರ್ಷ ಗುತ್ತಿಗೆ ಅವಧಿಗೆ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಲಾಗುವುದು).

JOINT DIRECTOR
Karnataka Industrial Areas Development Board
Head Office, Bengaluru